ಕ್ರಮ ಸಂಖ್ಯೆ	ಆರ್ಥಿಕ ವರ್ಷ	ಒದಗಿಸಿದ ಅನುದಾನ ರೂ. ಕೋಟಿಗಳಲ್ಲಿ
1.	2008–09	316.65
2.	2009–10	229.89
3.	2010–11	521.98

ಉ) ಇದರಿಂದ ಪ್ರಯೋಜನ ಪಡೆದ ಫಲಾನುಭವಿಗಳ ವಿವರ. ಅಂದಾಜು ವಿನಿಯೋಗಿಸಲಾಗಿರುವ ಹಣದ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಆರ್ಥಿಕ ವರ್ಷ	ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ	ವಿನಿಯೋಗಿಸಲಾದ ಹಣ ರೂ. ಕೋಟಿಗಳಲ್ಲಿ
1.	2008–09	297764	316.65
2.	2009–10	144999	229.89
3.	2010–11	284764	521.98

ಈ ಯೋಜನೆಯಡಿ ಫಲಾನುಭವಿಗಳು 18 ವರ್ಷ ಪೂರ್ಣಗೊಂಡು, ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿದ ನಂತರ ಪ್ರಯೋಜನ ಪಡೆಯಲು ಅರ್ಹರಿರುತ್ತಾರೆ.

Particulars of GSDP
112 : (193)

ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)

ಅ) ವಿವಿಧ ವಲಯಗಳ ಒಟ್ಟು ರಾಜ್ಯದ ಆಂತರಿಕ ಉತ್ಪನ್ನವನ್ನು ಅಖಿಲ ಭಾರತದ ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದಂತೆ ವಾರ್ಷಿಕ ಹಾಗೂ ಸರಾಸರಿ ವಾರ್ಷಿಕ ಬೆಳವಣಿಗೆ ದರಗಳು ಎಷ್ಟಿವೆ (ವರ್ಷವಾರು ವಿವರಗಳನ್ನು ನೀಡಬೇಕು)

ಆ) ಕರ್ನಾಟಕದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಕೊಡುಗೆಯು ಎಷ್ಟಿದೆ.

ಇ) ಕೃಷಿ ವಲಯದ ಕೊಡುಗೆಯ ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗುತ್ತಿದೆಯೇ

ಈ) ರಾಜ್ಯದ ಒಟ್ಟು ಆಂತರಿಕ ಒಟ್ಟು ಆಂತರಿಕ ಉತ್ಪನ್ನದಲ್ಲಿ ಈ ವಲಯದ ಕೊಡುಗೆಯು ಕಡಿಮೆಯಾಗಲು ಕಾರಣವೇನು?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ವಿವಿಧ ವಲಯಗಳ ಒಟ್ಟು ರಾಜ್ಯದ ಆಂತರಿಕ ಉತ್ಪನ್ನವನ್ನು ಅಖಿಲ ಭಾರತದ ಒಟ್ಟು ಆಂತರಿಕ ಉತ್ಪನ್ನಕ್ಕೆ ಹೋಲಿಸಿದಂತೆ ವಾರ್ಷಿಕ ಹಾಗೂ ಸರಾಸರಿ ವಾರ್ಷಿಕ ಬೆಳವಣಿಗೆ ದರಗಳು ಈ ಕೆಳಕಂಡಂತಿವೆ.

ಹನ್ನೊಂದನೇ ಪಂಚ ವಾರ್ಷಿಕ ಯೋಜನಾವಧಿಯಲ್ಲಿ ಕರ್ನಾಟಕ ರಾಜ್ಯದ ಮತ್ತು ಅಖಿಲ ಭಾರತ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಬೆಳವಣಿಗೆ ದರಗಳು (%)

ಪಂಚ ವಾರ್ಷಿಕ ಯೋಜನೆ / ವರ್ಷಗಳು	ಕರ್ನಾಟಕ				ಅಖಿಲ ಭಾರತ			
	ಕೃಷಿ	ಕೈಗಾರಿಕೆ	ಸೇವಾ	ರಾಜ್ಯದ ಒಟ್ಟು ಆಂತರಿಕ ಉತ್ಪನ್ನ	ಕೃಷಿ	ಕೈಗಾರಿಕೆ	ಸೇವಾ	ಒಟ್ಟು ಆಂತರಿಕ ಉತ್ಪನ್ನ
ಗುರಿ ಹಿಃಯ ಪ.ವಾ.ಯೋ.	5.4	12.5	12.0	11.2	4.1	10.5	9.9	9.0
2007–08	12.4	10.8	13.8	12.6	5.8	9.7	10.3	9.3
2008–09	2.3	5.1	9.8	7.1	0.1	4.4	10.0	6.7
2009–10	3.6	0.7	8.2	5.2	1.0	8.4	10.5	8.4
2010–11	13.3	6.1	9.1	8.9	7.0	7.2	9.3	8.4
2011–12	–2.9	3.6	10.6	6.4	2.5	3.9	9.4	6.9
ಸಾಧನೆ ಹಿಜ ಪ.ವಾ.ಯೋ.	5.7	5.3	10.3	8.0	3.3	6.7	9.9	7.9

ಆ) ಕರ್ನಾಟಕದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಲಯವಾರು ಕೊಡುಗೆಯು ಈ ಕೆಳಕಂಡಂತಿವೆ :

ಪ್ರಸಕ್ತ ಬೆಲೆಗಳಲ್ಲಿ ಕರ್ನಾಟಕದ ರಾಜ್ಯದ ಒಟ್ಟು ಆಂತರಿಕ ವಲಯವಾರು ಕೊಡುಗೆ (%)

ಉದ್ಯಮ	2004–2005	2005–2006	2006–2007	2007–2008	2008–2009	2009–2010	2010–2011ಕ.ಇ.	2011–2012ಂ.ಇ.
1. ಕೃಷಿ	18.7	19.55	17.33	17.04	15.87	16.25	16.78	15.94
2. ಕೈಗಾರಿಕೆ	30.28	29.63	31.99	31.81	31.34	29.27	28.6	27.24
3. ಸೇವೆಗಳು	51.02	50.82	50.67	51.15	52.8	54.48	54.61	56.32
ಒಟ್ಟು	**100**	**100**	**100**	**100**	**100**	**100**	**100**	**100**

ಇ) ಕೃಷಿ ವಲಯದ ಕೊಡುಗೆಯು 2005–06 ರಲ್ಲಿ ಶೇ. 19.55 ರಷ್ಟಿದ್ದು 2008–09 ರಲ್ಲಿ ಶೇ. 15.87 ರಷ್ಟು ವ್ಯತ್ಯಾಸವಾಗಿದೆ. ಪ್ರಸ್ತುತ ವರ್ಷದಲ್ಲಿ ಕೃಷಿ ವಲಯದ ಕೊಡುಗೆಯು ಶೇ. 15.94 ರಷ್ಟಿದೆ.

ಈ) ಯಾವುದೇ ಆರ್ಥಿಕ ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳಲ್ಲಿ ಸೇವಾ ವಲಯದ ಒಟ್ಟು ಮತ್ತು ನಿವ್ವಳ ಮೌಲ್ಯವು ಹಾಗೂ ಅದರ ವಾರ್ಷಿಕ ಬೆಳವಣಿಗೆಯ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ತುಲನಾತ್ಮಕವಾಗಿ ಹೆಚ್ಚು ಇರುತ್ತದೆ. ಆದ್ದರಿಂದ ತುಲನಾತ್ಮಕವಾಗಿ ಕೃಷಿ ವಲಯದ ಕೊಡುಗೆಯು ಹಲವಾರು ವರ್ಷಗಳಿಂದ ಕಡಿಮೆಯಾಗುತ್ತಿದೆ.

ಅಂಗನವಾಡಿ ಕೇಂದ್ರದ ಸಿಬ್ಬಂದಿಗೆ ಸಂಬಳ

126 : (267)

ಶ್ರೀ ಯು.ಟಿ. ಖಾದರ್ (ಮಂಗಳೂರು)

ಅ) ಮಂಗಳೂರು ವಿಧಾನ ಸಭಾ ಕ್ಷೇತ್ರದ ಅಂಗನವಾಡಿ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಸರಿಯಾದ ಸಮಯಕ್ಕೆ ಸಂಬಳ ಪಾವತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಂಗನವಾಡಿ ಕೇಂದ್ರದ ಸಿಬ್ಬಂದಿ ವರ್ಗದವರಿಗೆ ಸರಿಯಾದ ಸಮಯಕ್ಕೆ ಸಂಬಳ ಪಾವತಿಸಲು ಸರ್ಕಾರದ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)

ಇ) ಮಂಗಳೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಶಾಶ್ವತ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಒದಗಿಸಲಾಗುವುದೇ;

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಮಂಗಳೂರು ವಿಧಾನ ಸಭಾ ಕ್ಷೇತ್ರದ ಅಂಗನವಾಡಿ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಸರಿಯಾದ ಸಮಯಕ್ಕೆ ಸಂಬಳ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಅಂಗನವಾಡಿ ಕೇಂದ್ರದ ಸಿಬ್ಬಂದಿ ವರ್ಗದವರಿಗೆ ಸರಿಯಾದ ಸಮಯಕ್ಕೆ ಗೌರವಧನ ಪಾವತಿಸಲು ಪ್ರತಿ ತ್ರೈಮಾಸಿಕದ ಪ್ರಾರಂಭದಲ್ಲಿಯೇ ಅನುದಾನ ಬಿಡುಗಡೆ ಮಾಡುತ್ತಿರುವುದಲ್ಲದೆ, ಮಾರ್ಚ್ 2012 ರವರೆಗೆ ಅವಶ್ಯಕವಿದ್ದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅಂಗನವಾಡಿ ಕಾರ್ಯಕರ್ತೆ / ಅಂಗನವಾಡಿ ಸಹಾಯಕಿಯರ ಗೌರವಧನ ಪಾವತಿಸದೆ ಜಿಲ್ಲಾ ಕಚೇರಿಯ ಉಪ ನಿರ್ದೇಶಕರು / ನಿರೂಪಣಾಧಿಕಾರಿಗಳ ಹಾಗೂ / ಶಿಶು